OFFICE OF THE
ADDITIONAL DIRECTOR
KARNATAKA STATE AUDIT
AND ACCOUNTS DEPARTMENT
REGIONAL OFFICE O/O KARNATAKA STATE SEEDS
CORPORATION LTD, C.T.S NO:4807/A-1
R.S NO:980 J.D.A OFFICE COMPOUND, 1st FLOOR,
SHIVAJI NAGAR, BELAGAVI- 590016
Phone No:0831-2454090
Email Id: adrobelagavi@gmail.com

(ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ)

ಅಪರ ನಿರ್ದೇಶಕರ ಕಚೇರಿ
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಚೇರಿ
ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ
ಕಚೇರಿ ಕಟ್ಟಡ ಸಿ.ಟಿ.ಎಸ್. ನಂ: 4807/ಎ-1
ಆರ್.ಎಸ್. ನಂ:980 ಜೆ.ಡಿ.ಎ ಕಚೇರಿ ಆವರಣ,
ಮೊದಲನೇ ಮಹಡಿ, ಶಿವಾಜಿನಗರ, ಬೆಳಗಾವಿ- 590016
ದೂರವಾಣಿ: 0831-2454090
Email Id: adrobelagavi@gmail.com

ಸಂಖ್ಯೆ: ಪ್ರಾಂ.ಕ.ಬೆ/ಕರಾಕಾವಿಹು/ಲೆಪವ/2021-22/ 332 ದಿನಾಂಕ: 05/01/2022

ಇವರಿಗೆ,
ಕುಲಸಚಿವರು,
ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ,
ನವನಗರ, ಹುಬ್ಬಳ್ಳಿ.

ಮಾನ್ಯರೇ,

**ವಿಷಯ:** ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ 2017-19ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಸಲ್ಲಿಸುವ ಕುರಿತು.

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯ 2017-19ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2009 ರ ನಿಯಮ 56(2) ರ ಪ್ರಕಾರ ಕೈಗೊಂಡು ವರದಿಯನ್ನು ಈ ಪತ್ರಕ್ಕೆ ಲಗತ್ತಿಸಿ ಕಳುಹಿಸಲಾಗಿದೆ.

ಮುಂದುವರೆದು, ಸದರಿ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನಾ ಸಮಯದಲ್ಲಿ 106 ಲೆಕ್ಕಪರಿಶೋಧನಾ ವಿಚಾರಣಾ ಪತ್ರಗಳಿಗೆ 34 ಅನುಸರಣೆಯನ್ನು ನೀಡಿದ್ದರಿಂದ ವರದಿಯಲ್ಲಿ ಒಟ್ಟು 40 ಕಂಡಿಕೆಗಳಿಂದ ರೂ.**6,40,26,999/-** ಆಕ್ಷೇಪಣೆ ಮೊತ್ತ ಮತ್ತು ಒಟ್ಟು 18 ಕಂಡಿಕೆಗಳಿಂದ ರೂ.**2,44,51,472/-** ವಸೂಲಾತಿ ಮೊತ್ತಗಳಿಗೆ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2009 ರ ನಿಯಮ 56(4)ರ ರನ್ವಯ ಕ್ರಮ ಜರುಗಿಸುವುದು ಹಾಗೂ ಸದರಿ ವರದಿಯು ತಲುಪಿದ ಕುರಿತು ಸ್ವೀಕೃತಿ ಪತ್ರ ಕಳುಹಿಸಲು ಕೋರಿದೆ.

ತಮ್ಮ ವಿಶ್ವಾಸಿ,

05/01/2022
ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ
ಪ್ರಾಂತೀಯ ಕಚೇರಿ, ಬೆಳಗಾವಿ.

ಅಡಕ: 2017-19ನೇ ಸಾಲಿನ
ಲೆಕ್ಕಪರಿಶೋಧನಾ ವರದಿ.

76. ಪುಸ್ತಕಗಳು ಹಾಗೂ ನಿಯತಕಾಲಿಕೆಗಳ ದಾಸ್ತಾನು ಲೆಕ್ಕಗಳ ಕುರಿತು:

2017–19ನೇ ಸಾಲಿನ ಪುಸ್ತಕಗಳು ಹಾಗೂ ನಿಯತಕಾಲಿಕೆಗಳು ದಾಸ್ತಾನು ಲೆಕ್ಕ ಪರಿಶೀಲಿಸಲಾಗಿ ಕರ್ನಾಟಕ ಆರ್ಥಿಕ ಸಂಹಿತೆ–1958 ಅನುಚ್ಛೇದ–173 ರಂತೆ ಹಾಗೂ ಕೈಪಿಡಿಯ ಸಾಮಾನ್ಯ ಸುತ್ತೋಲೆ ಪ್ರಕಾರ ಫಾರ್ಮ–36 ರಲ್ಲಿ ಗ್ರಂಥಪಾಲಕರು ನಿರ್ವಹಿಸಿರುವ ಪುಸ್ತಕಕ್ಕೆ ಪತ್ರಾಂಕಿತ ಸಹಾಯಕರು ಗ್ರಂಥಾಲಯ ಪುಸ್ತಕದ ಪ್ರಕಾರ ಮಾರ್ಚ್ 31ರಂದು ಪ್ರತಿ ವರ್ಷ ಪರೀಕ್ಷಿಸಿ ಸಕ್ಷಮ ಪ್ರಾಧಿಕಾರಕ್ಕೆ ಪ್ರಮಾಣೀಕರಿಸಿ ವರದಿಯನ್ನು ಸಲ್ಲಿಸಬೇಕಾಗುತ್ತದೆ. ಈ ಬಗ್ಗೆ ಲೆಕ್ಕಪರಿಶೋಧನೆ ಸಮಯದಲ್ಲಿ ಕಂಡು ಬಂದಿರುವುದಿಲ್ಲ.ಆದ್ದರಿಂದ ನಿಯಮ ಉಲ್ಲಂಘಿಸಿರುವುದಕ್ಕೆ ಸ್ಪಷ್ಟೀಕರಣ ಕೋರಿ ಲೆಕ್ಕಪರಿಶೋಧನೆ ವಿಚಾರಣಾ ಪತ್ರ ಸಂಖ್ಯೆ: 70 ದಿನಾಂಕ:05.03.2021 ರಂತೆ ನೀಡಲಾಗಿತ್ತು. ದಿನಾಂಕ:27.04.2021 ರಂದು ಸಲ್ಲಿಸಿದ ಉತ್ತರ ಅಸಮಂಜಸವಾಗಿರುತ್ತದೆ. ಕಾರಣ ಮುಂದಿನ ಲೆಕ್ಕಪರಿಶೋಧನೆಗೆ ಗ್ರಂಥಾಲಯ ದಾಸ್ತಾನು ವಹಿಯನ್ನು ಪ್ರಮಾಣೀಕರಿಸಿ ಹಾಜರುಪಡಿಸಲು ಸೂಚಿಸಿದೆ.

77. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಅಂತರ ಮಹಾವಿದ್ಯಾಲಯಗಳ ಕ್ರೀಡಾಕೂಟದಲ್ಲಿ ಕಾನೂನು ಮಹಾವಿದ್ಯಾಲಯಗಳು ಪಡೆದ ಸರಕು/ಸೇವೆಗಳಿಗೆ ನಗದು ರೂಪದಲ್ಲಿ ಹಣ ಪಾವತಿಸಿರುವ ಕುರಿತು:

2017–19 ನೇ ಸಾಲಿನ ಲೆಕ್ಕಪರಿಶೋಧನೆ ವೇಳೆ ಪರಿಶೀಲಿಸಲಾಗಿ, ವಿವಿಧ ಕಾನೂನು ಮಹಾವಿದ್ಯಾಲಯಗಳು ಆಯೋಜಿಸಿದ ಅಂತರ ಮಹಾವಿದ್ಯಾಲಯಗಳ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಬಹುಮಾನ, ನಿರ್ಣಾಯಕರುಗಳಿಗೆ ಗೌರವಧನ/ಸಂಭಾವನೆ, ಸರಕು/ಸೇವೆ ಪಡೆದಿರುವುದಕ್ಕೆ ಹಣ ಪಾವತಿ ಮಾಡಿರುವುದಕ್ಕಾಗಿ ವಿಶ್ವವಿದ್ಯಾಲಯ ದಿನಾಂಕ: 13.03.2018 ರಂದು ಚೆಕ್ ಸಂಖ್ಯೆ 990708, 990709 ಮತ್ತು 990710 ಗಳ ಮೂಲಕ ಬಿ.ಎಮ್.ಎಸ್. ಲಾ ಕಾಲೇಜ್ ಬೆಂಗಳೂರು, ಅವರಿಗೆ ರೂ.49,940 ಬಿ.ಐ.ಎಲ್.ಎಸ್ ಕಾಲೇಜ್ ಬೆಂಗಳೂರು, ಅವರಿಗೆ ರೂ. 1,18,920/– ಮತ್ತು ಆರ್.ಎಲ್.ಲಾ ಕಾಲೇಜ್ ದಾವಣಗೆರೆ ಅವರಿಗೆ ರೂ.1,57,190 ಗಳಷ್ಟು ಒಟ್ಟು ರೂ. 3,26,605 ಮೊತ್ತವನ್ನು ಪಾವತಿಸಲಾಗಿದ್ದು, ಸದರಿ ಪಾವತಿಗಳ ಎದುರಾಗಿ ಸ್ವೀಕರಿಸಲಾದ ಎಲ್ಲ ಬಿಲ್ಲು ಹಾಗೂ ರಶೀದಿಗಳನ್ನು ಗಮನಿಸಲಾಗಿ, ಸದರಿ ಮಹಾವಿದ್ಯಾಲಯಗಳು ಪ್ರತಿಯೊಂದನ್ನು ನಗದು ರೂಪದಲ್ಲಿ ಪಾವತಿಸಿರುವುದು ಕಂಡುಬಂದಿದ್ದು, ಕರ್ನಾಟಕ ಆರ್ಥಿಕ ಸಂಹಿತೆ–1958 ರ ಅನುಚ್ಛೇದ 7 ರ ಪ್ರಕಾರ ನಗದು ರೂಪದಲ್ಲಿ ಹಣವನ್ನು ಪಾವತಿಸಲು ಅವಕಾಶವಿರುವುದಿಲ್ಲ ಕಾರಣ ಈ ಕುರಿತು ಸೂಕ್ತ ವಿವರಣೆ ನೀಡಲು ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 54 ದಿನಾಂಕ: 15.02.2021ರ ಮೂಲಕ ಕೋರಲಾಗಿ ಯಾವುದೇ ಅನುಸರಣೆ ನೀಡಿರುವುದಿಲ್ಲ. ಕಾರಣ ರೂ.3,26,050/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

OFFICE OF THE
ADDITIONAL DIRECTOR
KARNATAKA STATE AUDIT
AND ACCOUNTS DEPARTMENT
REGIONAL OFFICE
O/O KARNATAKA STATE SEEDS CORPORATION
LTD, C.T.S NO:4807/A-1 R.S NO:980 J.D.A OFFICE
COMPOUND, 1st FLOOR,
SHIVAJI NAGAR, BELAGAVI- 590016
Phone No:0831-2454090
Email Id: adrobelagavi@gmail.com

( ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ )

ಅಪರ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ, ಪ್ರಾಂತೀಯಕಚೇರಿ
ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ
ಕಚೇರಿಕಟ್ಟಡ ಸಿ.ಟಿ.ಎಸ್. ನಂ: 4807/ಎ-1
ಆರ್.ಎಸ್. ನಂ:980 ಜೆ.ಡಿ.ಎ ಕಚೇರಿ ಆವರಣ,
ಮೊದಲನೇ ಮಹಡಿ, ಶಿವಾಜಿನಗರ,
ಬೆಳಗಾವಿ- 590016
ದೂರವಾಣಿ: 0831-2454090
Email Id: adrobelagavi@gmail.com

ಸಂಖ್ಯೆ: ಪ್ರಾಂ.ಕ.ಬೆ/ಕರಾಕಾವಿಹು/ಲೆಪವ/2023-24 546 ದಿನಾಂಕ: 06/10/2023

ಇವರಿಗೆ,
ಕುಲಸಚಿವರು,
ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ,
ನವನಗರ, ಹುಬ್ಬಳ್ಳಿ.

**ಮಾನ್ಯರೇ,**

**ವಿಷಯ**: ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ ಹುಬ್ಬಳ್ಳಿಯ 2019-21 ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಬಿಡುಗಡೆಗೊಳಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ ಹುಬ್ಬಳ್ಳಿಯ 2019-21 ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2009 ರ ನಿಯಮ 56(2) ರ ಪ್ರಕಾರ ಕೈಗೊಂಡು ವರದಿಯನ್ನು ಈ ಪತ್ರದೊಂದಿಗೆ ಅಡಕವಿರಿಸಿ ಕಳುಹಿಸಿದೆ.

ಲೆಕ್ಕಪರಿಶೋಧನಾ ವರದಿಯಲ್ಲಿರುವ ಒಟ್ಟು ರೂ.10,16,41,073/- ಆಕ್ಷೇಪಣೆ ಮೊತ್ತ ಹಾಗೂ ರೂ.10,38,04,192 /- ಮೊತ್ತದ ವಸೂಲಾತಿಗಳನ್ನು ಗಮನಿಸಲಾಗಿದೆ. ಸದರಿ ಆಕ್ಷೇಪಣೆ/ ವಸೂಲಾತಿ ಕಂಡಿಕೆಗಳಿಗೆ ವಿಶ್ವವಿದ್ಯಾಲಯ ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ತಮ್ಮ ಅಭಿಪ್ರಾಯದೊಂದಿಗೆ ಅನುಸರಣಾ ವರದಿಯನ್ನು ಸಲ್ಲಿಸುವಂತೆ ಕ್ರಮ ಜರುಗಿಸಲು ಕೋರಲಾಗಿದೆ.

ಸದರಿ 2019-21 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯು ತಲುಪಿದ ಕುರಿತು ಸ್ವೀಕೃತಿ ಪತ್ರ ಕಳುಹಿಸಲು ಕೋರಿದೆ.

ತಮ್ಮ ವಿಶ್ವಾಸಿ,

ಅಪರ ನಿರ್ದೇಶಕರು 10/2023
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ
ಪ್ರಾಂತೀಯ ಕಚೇರಿ, ಬೆಳಗಾವಿ.

ಅಡಕ: ಲೆಕ್ಕಪರಿಶೋಧನಾ ವರದಿ.

Adm)
16/10/23

506

ಒದಗಿಸಲಾಗುವುದು ಎಂದು ತಿಳಿಸಿರುತ್ತಾರೆ. ಕಾರಣ ವಿಶ್ವವಿದ್ಯಾಲಯದ 09 ಬೋಧಕ ಸಿಬ್ಬಂದಿಯವರ ವೇತನದಲ್ಲಿ ಕಟಾಯಿಸಿದ ಎನ್ ಪಿ ಎಸ್ ವಂತಿಗೆ ಮೊತ್ತವನ್ನು ಎನ್ ಎಸ್ ಡಿ ಎಲ್ ಮೂಲಕ ನಿರ್ವಹಿಸಿ ಸರ್ಕಾರಿ ಆದೇಶ ಸಂ: 31.08.2019 ರನ್ವಯ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಆದೇಶಗಳಲ್ಲಿ ಸೂಚಿಸಿದ ಕಾರ್ಯ ವಿಧಾನಕ್ಕೆ ವ್ಯತಿರಿಕ್ತವಾಗಿರುತ್ತದೆ. ಈ ಕುರಿತು ಹಿಂದಿನ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಈ ಕುರಿತು ಆಕ್ಷೇಪಿಸಲಾಗಿದ್ದರೂ ಸೂಕ್ತ ಕ್ರಮ ಜರುಗಿಸದೇ ಮುಂದುವರೆಸಿರುವುದು ಕರ್ನಾಟಕ ಆಯವ್ಯಯ ಕೈಪಿಡಿ ಕಂಡಿಕೆ 318 ಕ್ಕೆ ವ್ಯತಿರಿಕ್ತವಾಗಿದೆ. ಪ್ರಯುಕ್ತ ವಿಶ್ವವಿದ್ಯಾಲಯದ 09 ಜನ ಬೋಧಕ ಸಿಬ್ಬಂದಿಯವರ ವೇತನದಲ್ಲಿ 2019-21 ನೇ ಸಾಲಿನಲ್ಲಿ ಕಟಾಯಿಸಲಾದ ಎನ್ ಪಿ ಎಸ್ ವಂತಿಕೆಯನ್ನು ಎನ್ ಎಸ್ ಡಿ ಎಲ್ ಮೂಲಕ ನಿರ್ವಹಿಸಿ ಸೂಕ್ತ ಅನುಸರಣೆಯನ್ನು ಒದಗಿಸುವವರೆಗೆ ಬ್ಯಾಂಕ್‌ನಲ್ಲಿ ಜಮೆ ಮಾಡಲಾದ ಒಟ್ಟು ಮೊತ್ತ **ರೂ. 34,77,320/-** ಗಳನ್ನು **ಆಕ್ಷೇಪಣೆಯಲ್ಲಿಡಲಾಗಿದೆ.** ವಿವರಗಳನ್ನು **ಅನುಬಂಧ: 13 ರಲ್ಲಿ** ನಮೂದಿಸಿ ವರದಿಗೆ ಲಗತ್ತಿಸಲಾಗಿದೆ.

## 25. ಗ್ರಂಥಾಲಯ

### 25.1 ವಿಶ್ವವಿದ್ಯಾಲಯದ ಗ್ರಂಥಾಲಯ ವಿಭಾಗದಿಂದ ಆನ್‌ಲೈನ್ ಡೆಟಾಬೇಸ್ ಸೇವೆಯನ್ನು ಪಡೆದಿರುವುದರಲ್ಲಿ ನ್ಯೂನತೆಗಳು ಕಂಡು ಬಂದಿರುವುದರಿಂದ ರೂ. 26,67,127/- ಗಳನ್ನು ಆಕ್ಷೇಪಣೆಗೆ ಹಾಗೂ ರೂ. 32,972/-ಗಳಷ್ಟು ಮೊತ್ತವನ್ನು ವಸೂಲಾತಿಗೆ ಸೂಚಿಸಿರುವ ಕುರಿತು.

2019-21 ನೇ ಸಾಲಿನ ಲೆಕ್ಕಪರಿಶೋಧನೆ ವೇಳೆ ಗ್ರಂಥಾಲಯ ವಿಭಾಗಕ್ಕೆ ಸಂಬಂಧಪಟ್ಟ ವೆಚ್ಚದ ವೋಚರ್‌ಗಳನ್ನು ಪರಿಶೀಲಿಸಲಾಗಿ, ಗ್ರಂಥಾಲಯ ವಿಭಾಗದವರು ಕೆಲವು ಸಂಸ್ಥೆಗಳಿಂದ ವಾರ್ಷಿಕವಾಗಿ ಜರ್ನಲ್ಸ್ ಗಳಿಗೆ ಸಂಬಂಧಪಟ್ಟಂತೆ ಆನ್‌ಲೈನ್ ಡೆಟಾಬೇಸ್ ಸೇವೆಯನ್ನು ಪಡೆಯಲು ಚಂದಾದಾರರಾಗಿದ್ದು ಸದರಿ ಸೇವಾ ಪೂರೈಕೆದಾರರಿಗೆ ಈ ಕೆಳಗೆ ತೋರಿಸಿದಂತೆ ಹಣ ಪಾವತಿಸಿರುವುದು ಕಂಡುಬಂದಿರುತ್ತದೆ.

(ಮೊತ್ತ ರೂ.ಗಳಲ್ಲಿ)

| ಕ್ರ. ಸಂ | ಸರಕು/ ಸೇವಾ ಪೂರೈಕೆದಾರ ಸಂಸ್ಥೆ | ಚೆಕ್ ಸಂಖ್ಯೆ/ ದಿನಾಂಕ | ಬಿಲ್ ಸಂಖ್ಯೆ/ ದಿನಾಂಕ | ಮೊತ್ತ |
|---|---|---|---|---|
| 1 | ಇಸ್ಟರ್ನಬುಕ್ ಕಂಪನಿ, ನವದೆಹಲಿ. | 179032/ 21.06.2019 | 3059/ 15.03.2019 | 3,99,941 |
| 2 | ಇಸ್ಟರ್ನಬುಕ್ ಕಂಪನಿ, ನವದೆಹಲಿ. | 179031/ 21.06.2019 | 3058/ 15.03.2019 | 2,75,000 |
| 3 | ಥಾಮ್ಸನ್ ರೇವುಟರ್ಸ್, ಮಹಾರಾಷ್ಟ್ರ | 179657/ 25.11.2019 | 6800856226/ 29.11.2019 | 3,98,344 |
| 4 | ಮನುಪಾತ್ರಾ, ಇನ್ ಫಾರ್ಮೇಶನ್, ಸೆಲ್ಯೂಷನ್ ನೊಯಿಡಾ ಯು.ಪಿ | 634988/ 07.03.2020 | 01204666/ 02.01.2020 | 1,18,000 |
| 5 | ಇಸ್ಟರ್ನಬುಕ್ ಕಂಪನಿ, ನವದೆಹಲಿ. | 635095/ 21.04.2020 | 61246/ 20.01.2020 | 2,97,000 |

| | | | | |
|---|---|---|---|---|
| 6 | ಥಾಮ್ಸನ್ ರೇವ್ಯುಟರ್ಸ್ | 635421/ 30.07.2020 | 6800974147/ 02.07.2020 | 3,98,344 |
| 7 | ಇಸ್ಟರ್ನ್ ಬುಕ್ ಕಂಪನಿ | 635528/ 19.09.2020 | 65/ 27.07.2020 | 6,76,670 |
| 8 | ಮನುಪಾತ್ರಾಯು.ಪಿ | 045893/ 31.03.2021 | 01214375/ 15.01.2021 | 1,36,800 |
| | | | **ಒಟ್ಟು ರೂ.** | **27,00,099** |

ಆನ್ಲೈನ್ ಡೆಟಾಬೇಸ್ ಸೇವೆಯನ್ನು ಪಡೆಯುವಲ್ಲಿ ಈ ಕೆಳಗಿನಂತೆ ನ್ಯೂನತೆಗಳು ಕಂಡುಬಂದಿರುತ್ತವೆ.

1. ಮೇಲಿನ ಪಟ್ಟಿಯಲ್ಲಿ ತಿಳಿಸಿದಂತೆ ಸದರಿ ಸಾಲಿನಲ್ಲಿ ರೂ. 27,00,099 ಗಳಷ್ಟುಆನ್ ಲೈನ್ ಡೆಟಾಬೇಸ್ ಸೇವೆಯನ್ನು ಪಡೆದಿದ್ದು ಸದರಿ ವೆಚ್ಚಕ್ಕೆ ಸಂಬಂಧಪಟ್ಟಂತೆ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಮತ್ತು ಸಿಂಡಿಕೇಟ್ ಸಮಿತಿಯಿಂದ ಅನುಮೋದನೆ ಪಡೆದಿರುವ ದಾಖಲೆಗಳನ್ನು ಒದಗಿಸಿರುವುದಿಲ್ಲ.
2. 2019-21 ನೇ ಸಾಲಿನಲ್ಲಿ ಡೆಟಾಬೇಸ್ ಸೇವೆ ಪಡೆದಿರುವುದಕ್ಕೆ ವಿವಿಧ ಸಂಸ್ಥೆಗಳಿಗೆ ರೂ. 27,00,099 ಗಳಷ್ಟು ಹಣ ಪಾವತಿಸಿದ್ದು ಯಾವ ಆಧಾರದ ಮೇಲೆ ಡೆಟಾಬೇಸ್ ಸೇವೆಗೆ ದರಗಳನ್ನು ನಿಗದಿಪಡಿಸಿ ಹಣ ಪಾವತಿಸಲಾಗುತ್ತಿದೆ ಎನ್ನುವುದಕ್ಕೆ ಸೂಕ್ತ ದಾಖಲೆಗಳನ್ನು ಒದಗಿಸಿರುವುದಿಲ್ಲ.
3. ಈ ಮೇಲೆ ತಿಳಿಸಿದಲಾದ ಎಲ್ಲ ಸಂಸ್ಥೆಗಳಿಂದ ಆನ್‌ಲೈನ್ ಡೇಟಾಬೇಸ್ ಸೇವೆಯನ್ನು ವಿದ್ಯಾರ್ಥಿಗಳು ಶೇಕಡಾ ಎಷ್ಟು ಪ್ರಮಾಣದಲ್ಲಿ ಉಪಯೋಗಿಸಿದ್ದಾರೆ ಎನ್ನುವುದರ ಕುರಿತು ವರದಿ (Usage Report) ಯನ್ನು ಹಾಜರುಪಡಿಸಿರುವುದಿಲ್ಲ.
4. ಇಸ್ಟರ್ನಬುಕ್ ಕಂಪನಿ ನವದೆಹಲಿ ಇವರು ಸದರಿ ಸಾಲಿನಲ್ಲಿ ರೂ. 16,48,611/- ಗಳಷ್ಟು ಆನ್‌ಲೈನ್ ಡೆಟಾಬೇಸ್ ಸೇವೆ (ಜರ್ನಲ್ಸ್) ಯನ್ನು ನೀಡಿದ್ದು ಸದರಿ ಬಿಲ್ಲುಗಳಲ್ಲಿ ರೂ. 32,972 ಗಳಷ್ಟು ಜಿ.ಎಸ್.ಟಿ ಮೊತ್ತವನ್ನು ಕಡತಗೊಳಿಸದೆ ಹಣಪಾವತಿಸಿರುವುದು ಕಂಡುಬಂದಿದ್ದು ಸದರಿಯವರು ಒಂದು ವೇಳೆ ಜಿ.ಎಸ್.ಟಿ ಯಿಂದ ವಿನಾಯಿತಿ ಹೊಂದಿದ್ದಲ್ಲಿ ಸೂಕ್ತ ದಾಖಲೆಗಳನ್ನು ಒದಗಿಸಿರುವುದಿಲ್ಲ.

ಈ ಮೇಲಿನ ನ್ಯೂನತೆಗಳಿಗೆ ಸೂಕ್ತ ದಾಖಲೆಗಳೊಂದಿಗೆ ಲೆಕ್ಕಪರಿಶೋಧನೆಗೆ ವಿವರಣೆ ನೀಡಲು ಕೋರಿ **ಲೆಕ್ಕಪರಿಶೋಧನೆ ವಿಚಾರಣಾ ಪತ್ರ ಸಂಖ್ಯೆ: 57, ದಿನಾಂಕ: 16.03.2023.** ರ ಮೂಲಕ ಕೋರಲಾಗಿ, ವಿಶ್ವವಿದ್ಯಾಲಯದವರು ದಿನಾಂಕ:29.03.2023 ರಂದು ಸಲ್ಲಿಸಿದ ಅನುಸರಣೆಯಲ್ಲಿ ಇನ್ ಪ್ಲಿಟ್ ನೆಟ್ ಸೆಂಟರ್ ನಲ್ಲಿ ನೆಗೋಷಿಯೇಶನ್ ಕಮೀಟಿಯು ದರಪಟ್ಟಿಯನ್ನು ನಿರ್ಧರಿಸುತ್ತದೆ ಎಂದು ತಿಳಿಸಿದ್ದು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿರುವುದಿಲ್ಲ. ಕಾರಣ ಅಪೂರ್ಣ ದಾಖಲೆಗಳೊಂದಿಗೆ ಅನುಸರಣೆ ನೀಡಿರುವುದರಿಂದ **ರೂ.26,67,127/-** ಗಳನ್ನು **(2700099-32972)** **ಆಕ್ಷೇಪಣೆಗೆ** ಹಾಗೂ **ರೂ.32,972/-** ರಷ್ಟು ಮೊತ್ತ (ಕಟಾವಣೆಗೊಳಿಸಬೇಕಾದ ಜಿ.ಎಸ್.ಟಿ.) ವನ್ನು **ವಸೂಲಾತಿಗೆ** ಸೂಚಿಸಿದೆ.

## 25.2 ಗ್ರಂಥಾಲಯಕ್ಕೆ ಪುಸ್ತಕಗಳನ್ನು ಖರೀದಿಸಿರುವುದರಲ್ಲಿ ಕಂಡುಬಂದಿರುವ ನ್ಯೂನತೆಗಳು

2019-21 ನೇ ಸಾಲಿನ ಲೆಕ್ಕಪರಿಶೋಧನೆ ವೇಳೆ ವೆಚ್ಚದ ವೋಚರಗಳನ್ನು ಪರಿಶೀಲಿಸಲಾಗಿ, ಈ ಕೆಳಗಿನಂತೆ ನ್ಯೂನತೆಗಳು ಕಂಡುಬಂದಿರುತ್ತವೆ.

1. ಎಮ್.ಪಿ.ಪಿ ಹೌಸ್ ಬೆಂಗಳೂರು ಮತ್ತು ಮೋಹನ್ ಲಾ ಹೌಸ್ ಬೆಂಗಳೂರು ಪುಸ್ತಕ ಮಾರಾಟಗಾರರು ಗುಡ್ ಆಫೀಸ ಕಮೀಟಿ ನವದೆಹಲಿ (GOC) ಯವರು ಪುಸ್ತಕ ಪೂರೈಕೆ ಕರಾರುಗಳಲ್ಲಿ ನಿಗದಿಪಡಿಸಿದಂತೆ, ಸದರಿಯವರು ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಪುಸ್ತಕ ವ್ಯಾಪಾರ/ ಮಾರಾಟ ಸಂಘ ಮತ್ತು ಒಕ್ಕೂಟಗಳ ಅಧಿಕೃತ ಸದಸ್ಯರಾಗಿರುವ ಕುರಿತು ಸೂಕ್ತ ದಾಖಲೆ ಒದಗಿಸಿರುವುದಿಲ್ಲ.
2. ಪುಸ್ತಕಗಳ ಪೂರೈಕೆದಾರರ ಸಂಸ್ಥೆ 'ಗುಡ್‌ಆಫೀಸ್ ಕಮೀಟಿ' ಷರತ್ತುಗಳ ಪ್ರಕಾರ ಪುಸ್ತಕಗಳು ಇತ್ತೀಚಿನ ಆವೃತ್ತಿಯದ್ದಾಗಿರುತ್ತವೆ. (Only latest edition) ಎಂದು ಘೋಷಣೆ (declaration) ಹಾಕಿರುವುದಿಲ್ಲ.

ಈ ಮೇಲಿನ ನ್ಯೂನತೆಗಳಿಗೆ ಸೂಕ್ತ ದಾಖಲೆಗಳೊಂದಿಗೆ ಲೆಕ್ಕಪರಿಶೋಧನೆಗೆ ವಿವರಣೆ ನೀಡಲು **ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 30 ದಿನಾಂಕ: 22.02.2023.** ರ ಮೂಲಕ ಕೋರಲಾಗಿ, ವಿಶ್ವವಿದ್ಯಾಲಯ ದಿನಾಂಕ 24.03.2023 ರಂದು ಅನುಸರಣೆ ನೀಡಿದ್ದು ಎಮ್.ಪಿ.ಪಿ. ಹೌಸ ಬೆಂಗಳೂರು ಮತ್ತು ಮೋಹನ ಹೌಸ, ಬೆಂಗಳೂರು ಇವರು ಅಧಿಕೃತ ಸದಸ್ಯರಾಗಿರುವ ಕುರಿತು ತಿಳಿಸಿದ್ದು ಅದನ್ನು ಧೃಡಪಡಿಸುವ ಯಾವುದೇ ದಾಖಲೆಗಳನ್ನು ಲಗತ್ತಿಸಿರುವದಿಲ್ಲ. ಕಾರಣ ಈ ಕುರಿತು ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ. ವಿವರವನ್ನು **ಅನುಬಂಧ-14** ರಲ್ಲಿ ನಮೂದಿಸಿ ವರದಿಗೆ ಲಗತ್ತಿಸಿದೆ.

## 25.3 10,000 ಸಂಖ್ಯೆಯ "ಕಾನೂನು ಕನ್ನಡ" ಪುಸ್ತಕಗಳನ್ನು ದಾಸ್ತಾನು ವಹಿಯಲ್ಲಿ ನಮೂದಿಸಿ ವಿತರಿಸಿದ ದಾಖಲೆ ಒದಗಿಸದೇ ಇರುವ ಕುರಿತು

2019-21 ರ ಸಾಲಿನ ಮುಂಗಡ ವೋಚರಗಳನ್ನು ಪರಿಶಿಲಿಸಲಾಗಿ ಎಇ-01/29-06-2020 ರ ಮುಂಗಡ ಹೊಂದಾಣಿಕೆ ಬಿಲ್ಲುಗಳನ್ನು ಪರಿಶೀಲಿಸಲಾಗಿ ಮುಂಗಡ ಮಂಜೂರಾತಿ ಆದೇಶ ಪತ್ರ ಸಂಖ್ಯೆ: ದಿನಾಂಕ: 04.02.2020 ರ ಪ್ರಕಾರ ನಿರ್ದೇಶಕರು ಸರ್ಕಾರಿ ಮುದ್ರಣಾಲಯ ಕರ್ನಾಟಕ ಸರ್ಕಾರ ಬೆಂಗಳೂರು ಇವರಿಗೆ 10,000 "ಕಾನೂನು ಕನ್ನಡ" ಪುಸ್ತಕಗಳನ್ನು ಮುದ್ರಿಸಿ ಪೂರೈಸಲು ಕಚೇರಿ ಪತ್ರ ಸಂಖ್ಯೆ: ಕ.ರಾ.ಕಾ.ವಿ/ದಾಸ್ತಾನು/2019-20/2134 ದಿನಾಂಕ: 04-02-2020 ರ ಮೂಲಕ ಪೂರೈಕೆ ಆದೇಶ ನೀಡಿದ್ದು ಮುಂಗಡವಾಗಿ ರೂ.401623/- ಗಳನ್ನು ಚೆಕ್ ಸಂಖ್ಯೆ: 634843 ದಿನಾಂಕ: 04-02-2020 ರಂದು ಪಾವತಿಸಿದ್ದು ಅದರಂತೆ ಪುಸ್ತಕಗಳನ್ನು ಸರ್ಕಾರಿ ಮುದ್ರಣಾಲಯ ಬೆಂಗಳೂರು ಇವರ ಬಿಲ್ ಸಂಖ್ಯೆ: DPS/CST/Bills/24 ದಿನಾಂಕ:08-05-2020 ರಲ್ಲಿ 10,000 ಕಾನೂನು ಕನ್ನಡ ಪುಸ್ತಕಗಳನ್ನು ಪೂರೈಸಿದ್ದು, ಈ ಕುರಿತು ಕೆಳಗಿನಂತೆ ನ್ಯೂನತೆಗಳನ್ನು ಗಮನಿಸಲಾಗಿದೆ.

1. ಸದರಿ ಪುಸ್ತಕಗಳ ಖರೀದಿಯಲ್ಲಿ ಗುಡ್ ಆಫೀಸ್ ಕಮಿಟಿಯ ಷರತ್ತುಗಳನ್ನು ಪಾಲಿಸಿದ ಕುರಿತು ದಾಖಲೆ ಲಭ್ಯಗೊಳಿಸಿಲ್ಲ.

2. ಸದರಿ ಪುಸ್ತಕಗಳನ್ನು ಗ್ರಂಥಾಲಯದ ಆಕ್ಸೆಶನ್ ರಜಿಸ್ಟರ್‌ದಲ್ಲಿ ನಮೂದಿಸಿದ ಹಾಗೂ ವಿತರಿಸಿದ ಮಾಹಿತಿ ಲಭ್ಯಗೊಳಿಸಿರುವುದಿಲ್ಲ.

ಈ ಮೇಲಿನ ಎಲ್ಲ ನ್ಯೂನತೆಗಳಿಗೆ ಸೂಕ್ತ ದಾಖಲೆಗಳೊಂದಿಗೆ ವಿವರಣೆ ಒದಗಿಸಲು ಕೋರಿ **ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 51, ದಿನಾಂಕ: 09-03-2023** ನ್ನು ನೀಡಲಾಗಿತ್ತು ವಿಶ್ವವಿದ್ಯಾಲಯವು ದಿನಾಂಕ:24-03-2023 ರಂದು ಸಲ್ಲಿಸಿದ ಅನುಸರಣೆಯಲ್ಲಿ ಪುಸ್ತಕಗಳನ್ನು ಗ್ರಂಥಾಲಯ ವಿಭಾಗದಿಂದ ಖರೀದಿಸಿರುವುದಿಲ್ಲ. ಕುಲಸಚಿವರ ಆದೇಶದ ಪ್ರಕಾರ ದಾಸ್ತಾನು ವಿಭಾಗದಿಂದ ಖರೀದಿಸಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ ಸದರಿ ಪುಸ್ತಕಗಳನ್ನು ದಾಸ್ತಾನು ವಹಿಯಲ್ಲಿ ನಮೂದಿಸಿ ವಿತರಿಸಿದ ಮಾಹಿತಿ ಪರಿಗಣಿಸಿರುವುದಿಲ್ಲ. ಈ ಕುರಿತು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

## 25.4 ಗ್ರಂಥಾಲಯ ವಿಭಾಗದ ದಾಖಲೆಗಳ ಪರಿಶೀಲನೆಯಲ್ಲಿ ಕಂಡು ಬಂದ ನ್ಯೂನತೆಗಳ ಕುರಿತು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ 2019-21 ನೇ ಸಾಲಿನ ಲೆಕ್ಕ ಪರಿಶೋಧನೆಯ ವೇಳೆ ಗ್ರಂಥಾಲಯ ವಿಭಾಗದ ದಾಖಲೆಗಳನ್ನು ಪರಿಶೀಲಿಸಲಾಗಿ, ಈ ಕೆಳಗಿನಂತೆ ನ್ಯೂನತೆಗಳು ಕಂಡು ಬಂದಿವೆ.

1. ದಿನ ಪತ್ರಿಕೆಗಳ ರದ್ದಿ ವಿಲೇವಾರಿ ಮಾಡಿರುವ ಕುರಿತು ವಿವರಣೆ ಹಾಗೂ ಸೂಕ್ತ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸಿರುವುದಿಲ್ಲ.

2. ಝುರಾಕ್ಸ್ ಯಂತ್ರದ ಲಾಗ್ ಬುಕ್ ನಿರ್ವಹಿಸಿರುವುದಿಲ್ಲ. ಮೌಖಿಕವಾಗಿ ವಿಚಾರಿಸಲಾಗಿ 2019 21 ನೇ ಸಾಲಿನ ವೇಳೆಯಲ್ಲಿ ಝುರಾಕ್ಸ್ ಯಂತ್ರ ದುರಸ್ತಿಯಲ್ಲಿತ್ತು ಎಂದು ತಿಳಿಸಿದ್ದು ದುರಸ್ತಿಯಲ್ಲಿದ್ದ ಕುರಿತು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

3. ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಬಾರೋವರ್ಸ್ ಕಾರ್ಡ ಮೊತ್ತಕ್ಕೂ ಮತ್ತು ವಾರ್ಷಿಕ ಲೆಕ್ಕಪತ್ರದಲ್ಲಿ ತೋರಿಸಿದ ಮೊತ್ತಕ್ಕೂ ವ್ಯತ್ಯಾಸ ಕಂಡು ಬಂದಿದ್ದು ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ವರ್ಷ | ವಿದ್ಯಾರ್ಥಿ ಸಂಖ್ಯೆ / ಬಾರೋವರ್ಸ ಕಾರ್ಡ ಮೊತ್ತ | ಒಟ್ಟು ಮೊತ್ತ | ವಾರ್ಷಿಕ ಲೆಕ್ಕಪತ್ರ ದನುಸಾರ | ವ್ಯತ್ಯಾಸದ ಮೊತ್ತ |
|---|---|---|---|---|---|
| 1 | 2019-20 | (ಬಿ.ಎ ಎಲ್. ಎಲ್, ಬಿ)116*500=58000, 22*750=16500(ಎಲ್ ಎಲ್ ಎಂ, ಪಿ.ಹೆಚ್. ಡಿ) | 74500 | 350850 | 276350 |
| 2 | 2020-21 | (ಬಿ.ಎ ಎಲ್. ಎಲ್, ಬಿ) 112*500=56000, 04*750=3000 (ಸಂಶೋಧನೆ) | 59000 | 409850 | 350850 |

ಸದರಿ ವ್ಯತ್ಯಾಸದ ಬಗ್ಗೆ ಸೂಕ್ತ ದಾಖಲೆಗಳೊಂದಿಗೆ ವಿವರಣೆ ನೀಡಲು ಹಾಗೂ ಮೇಲಿನ ನ್ಯೂನತೆಗಳಿಗೆ ಲೆಕ್ಕಪರಿಶೋಧನೆಗೆ ಸೂಕ್ತ ದಾಖಲೆಗಳೊಂದಿಗೆ ವಿವರಣೆ ನೀಡಲು ಕೋರಿ **ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 50, ದಿನಾಂಕ : 09.03.2023** ನ್ನು

ನೀಡಲಾಗಿ, ವಿಶ್ವವಿದ್ಯಾಲಯವು ದಿನಾಂಕ 24.03.2023 ರಂದು ನೀಡಿದ ಅನುಸರಣೆ ಸೂಕ್ತವಲ್ಲದ ಕಾರಣ ಮೇಲಿನ ನ್ಯೂನತೆಗಳನ್ನು ಸರಿಪಡಿಸಿ ಸೂಕ್ತ ದಾಖಲೆಗಳನ್ನು ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

## 26. ದಾಖಲೆಗಳನ್ನು ಹಾಜರುಪಡಿಸದಿರುವ ಕುರಿತು

### 26.1 ಐ.ಸಿ.ಎಸ್.ಎಸ್.ಆರ್ ಯೋಜನೆಗಾಗಿ ಖರ್ಚು ಮಾಡಲಾದ ಮೊತ್ತ ರೂ. 80,000 ಗಳ ವೋಚರಗಳನ್ನು ಹಾಜರುಪಡಿಸದಿರುವ ಕುರಿತು.

2019-20ನೇ ಸಾಲಿನ E-payment ಖಾತೆ ಸಂಖ್ಯೆ: 34564910277 ರ ನಗದು ಪುಸ್ತಕ ಪರಿಶೀಲಿಸಲಾಗಿ ದಿನಾಂಕ:12-12-2019 ರಂದು ಐ.ಸಿ.ಎಸ್.ಎಸ್.ಆರ್ ಯೋಜನೆಗಾಗಿ ದಿನಾಂಕ: 12-12-2019 ರಂದು ರೂ.80,000/-ಗಳ ಅನುದಾನವನ್ನು ಜಮ ತೆಗೆದುಕೊಂಡು ದಿನಾಂಕ: 09-01-2020 ರಂದು ಖಾತೆ ಸಂಖ್ಯೆ: 37688988797 ಗೆ ಜಮ ಮಾಡಿರುತ್ತಾರೆ. ಈ ಕುರಿತು ಕೆಳಗಿನ ನ್ಯೂನತೆಗಳನ್ನು ಗಮನಿಸಲಾಗಿದೆ.

1. ಐ.ಸಿ.ಎಸ್.ಎಸ್.ಆರ್ ಯೋಜನೆಗಾಗಿ ಬಂದ ಹಣವನ್ನು E-payment ಖಾತೆಯಲ್ಲಿ ಜಮ ತೆಗೆದುಕೊಂಡಿರುವ ವಿವರ ಒದಗಿಸಿರುವುದಿಲ್ಲ.
2. ಸದರಿ ಯೋಜನೆಗಾಗಿ ರೂ.80,000/-ಗಳನ್ನು ಖರ್ಚು ತೋರಿಸಿ ಖಾತೆ ಸಂಖ್ಯೆ: 37688988797 ಗೆ ಜಮ ಮಾಡಲಾಗಿದ್ದು ಸದರಿ ಖಾತೆಯ ವಿವರ ಒದಗಿಸಿರುವುದಿಲ್ಲ.
3. ಸದರಿ ಯೋಜನೆ ಕುರಿತು ನಿಯಮಾವಳಿಗಳನ್ನು ಹಾಗೂ ಖರ್ಚಿನ ವೋಚರುಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವದಿಲ್ಲ.

ಈ ಮೇಲಿನ ನ್ಯೂನತೆಗಳ ಕುರಿತು ಸೂಕ್ತ ದಾಖಲೆಗಳೊಂದಿಗೆ ವಿವರಣೆ ಸಲ್ಲಿಸಲು ಕೋರಿ **ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 43 ದಿನಾಂಕ: 02-03-2023** ನೀಡಲಾಗಿ, ವಿಶ್ವವಿದ್ಯಾಲಯವು ದಿನಾಂಕ: 12.04.2023 ರಂದು ಸಲ್ಲಿಸಿದ ಅನುಸರಣೆಯಲ್ಲಿ ಕೇವಲ ಹಣ ಉಪಯೋಗಿತ ಪ್ರಮಾಣ ಪತ್ರ ಮಾತ್ರ ಒದಗಿಸಿದ್ದು, ಖರ್ಚಿನ ಕುರಿತು ವೋಚರ್‌ಗಳನ್ನು ಒದಗಿಸಿರುವುದಿಲ್ಲ. ಕಾರಣ ಮೇಲಿನ ನ್ಯೂನತೆಗಳಿಗೆ ಸೂಕ್ತ ದಾಖಲೆಗಳೊಂದಿಗೆ ಅನುಸರಣೆ ಸಲ್ಲಿಸುವವರೆಗೆ ಸದರಿ ಯೋಜನೆಗಾಗಿ ಖರ್ಚು ಮಾಡಿದ **ರೂ. 80,000/-** ಗಳನ್ನು **ಆಕ್ಷೇಪಣೆಯಲ್ಲಿಡಲಾಗಿದೆ.**

### 26.2 ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳ ವಸತಿ ಗೃಹಗಳ ಕುರಿತು.

2019-21 ನೇ ಸಾಲಿನ ಲೆಕ್ಕಪರಿಶೋಧನೆ ವೇಳೆ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರುವ ಬೋಧಕ ಸಿಬ್ಬಂದಿಗಳ ಸಲುವಾಗಿ ತಯಾರಿಸಲ್ಪಟ್ಟ ವಸತಿ ಗೃಹಗಳ ದಾಖಲೆಯನ್ನು ಹಾಜರುಪಡಿಸಲು ಕೋರಿ **ಲೆಕ್ಕಪರಿಶೋದನಾ ವಿಚರಣಾ ಪತ್ರ ಸಂಖ್ಯೆ: 41 ದಿನಾಂಕ: 28.02.2023** ನ್ನು ನೀಡಲಾಗಿ, ಯಾವುದೇ ಅನುಸರಣೆ ಒದಗಿಸಿರುವುದಿಲ್ಲ. ಸದರಿ ದಾಖಲೆಯನ್ನು ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.